ಅಚ್ಚುಕಟ್ಟು ಪ್ರದೇಶದಲ್ಲಿ ನಾಟಿ ಪದ್ಧತಿಯಲ್ಲಿ ಬೆಳೆಯುವುದರಿಂದ ರೈತರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಅವುಗಳಲ್ಲಿ ಮುಖ್ಯವಾಗಿ ಸಮಯಕ್ಕೆ ಸರಿಯಾಗಿ ನೀರು ಸಿಗದೆ ಇರುವದಲ್ಲದೆ ಅಸಮರ್ಪಕ ನೀರಿನ ಬಳಕೆಯಿಂದ ಕಾಲುವೆಯ ಕೊನೆ ಪ್ರದೇಶಗಳಿಗೆ ನೀರು ದೊರೆಯುವಿಕೆಯ ಅನಿಶ್ಚಿತತೆ, ಕೃಷಿ ಕಾರ್ಮಿಕರ ಕೊರತೆ, ಅಧಿಕ ಖರ್ಚು ಮತ್ತು ವರ್ಷದಿಂದ ವರ್ಷಕ್ಕೆ ಕುಸಿಯುತ್ತಿರುವ ಭೂಮಿಯ ಫಲವತ್ತತೆ ಇತ್ಯಾದಿ ಈ ಎಲ್ಲ ಸಮಸ್ಯೆಗಳಿಗೆ ಭತ್ತದ ನೇರ ಬಿತ್ತನೆ ಬೇಸಾಯ ಮಾಡುವುದು ಉತ್ತಮ ಪರಿಹಾರ.

ಕೆಸರುಗದ್ದೆಯಲ್ಲಿ ಡ್ರಂ ಸೀಡರ್‌ನಿಂದ ಭತ್ತದ ನೇರ ಬಿತ್ತನೆ

ಭತ್ತದ ಬೇಸಾಯದಲ್ಲಿ ಕಡಿಮೆ ಆಳು ಬಳಸಿ ಸಕಾಲದಲ್ಲಿ ಬಿತ್ತನೆ ವಿಧಾನವೆಂದರೆ ಡ್ರಂ ಸೀಡರ್‌ನಿಂದ ಬಿತ್ತನೆ. ಈ ವಿಧಾನದಲ್ಲಿ ಒಟ್ಟುಪಾತಿ ತಯಾರಿಕೆ, ನಾಟಿ ಖರ್ಚು ಇರುವುದಿಲ್ಲ ಹಾಗೂ ಯಂತ್ರನಾಟಿ ಸಾಧ್ಯವಾಗದ ಕಡೆಯೂ ಬಳಸಬಹುದು. ಡ್ರಂಸೀಡರ್‌ನ ಬಿತ್ತನೆ ವಿಧಾನ ಹಾಗು ಬೇಸಾಯ ಕ್ರಮಗಳು ಈ ಕೆಳಕಂಡಂತಿವೆ.

ಭೂಮಿ ಸಿದ್ದತೆ : ಉಳುಮೆ ಹಾಗೂ ಕೆಸರುಗದ್ದೆ ತಯಾರಿಕೆ ಸಾಮಾನ್ಯ ಪದ್ದತಿಯಂತಿದ್ದು, ವಿಶೇಷವಾಗಿ ಗದ್ದೆಯ ಸಮತಟ್ಟು ಮಾಡುವುದರಲ್ಲಿ ಜಾಗರೂಕತೆ ವಹಿಸಬೇಕು. ಬಿತ್ತುವ ಮುನ್ನ ಗದ್ದೆಯಲ್ಲಿ ನೀರು ನಿಲ್ಲದಹಾಗೆ ನೋಡಿಕೊಳ್ಳಬೇಕು. ಶಿಫಾರಸ್ಸು ಮಾಡಿದ ರಸಗೊಬ್ಬರದಲ್ಲಿ ಶೇ. 50 ಭಾಗ ಸಾರಜನಕ, ಪೂರ್ತಿ ರಂಜಕ ಮತ್ತು ಪೊಟ್ಯಾಷ್‌ನ್ನು ಮಣ್ಣಿನಲ್ಲಿ ಸೇರಿಸಬೇಕು.

ಬಿತ್ತನೆ : ಡ್ರಂ ಸೀಡರ್‌ನಿಂದ ಬಿತ್ತನೆ ವಿಧಾನದಲ್ಲಿ ಎಕರೆಗೆ ಕೇವಲ 16 ಕೆ.ಜಿ. ಭತ್ತ ಸಾಕಾಗುತ್ತದೆ. ಆಯ್ಕೆ ಮಾಡಿದ ದೃಢೀಕೃತ ಭತ್ತವನ್ನು 24 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ ನಂತರ ಪ್ರತಿ ಕೆ.ಜಿ. ಬೀಜಕ್ಕೆ 4 ಗ್ರಾಂ ನಂತೆ ಕಾರ್ಬೆಂಡೈಜಿಂ ಪುಡಿಯಿಂದ ಉಪಚರಿಸಿ 36 ಗಂಟೆಗಳ ಕಾಲ ಗಾಳಿಯಾಡುವ ಗೋಣಿಚೀಲದಲ್ಲಿ ಕಟ್ಟಿದಾಗ ಭತ್ತ ಮೊಳಕೆಯೊಡೆಯುತ್ತದೆ. ಡ್ರಂ ಸೀಡರ್‌ಗೆ ಕುಡಿ ಮೊಳೆ ಬಂದಿರುವ ಭತ್ತ ಬಳಸುವುದು ಸೂಕ್ತ. ಮೊಳಕೆ ಉದ್ದವಾದಲ್ಲಿ ಡ್ರಂನಿಂದ ಬೀಳುವುದು ಕಷ್ಟವಾಗುತ್ತದೆ. ಹೀಗೆ ಕುಡಿ ಮೊಳೆ ಬಂದ ಭತ್ತವನ್ನು ಡ್ರಂ ಸೀಡರ್‌ನ ಎಲ್ಲಾ ಡ್ರಂ ಗಳಲ್ಲಿ ಸಮನಾಗಿ ತುಂಬಿ (3/4 ಭಾಗ) ಬಾಗಿಲನ್ನು ಭದ್ರಪಡಿಸಿ. ಬೇಸಿಗೆ ಕಾಲದಲ್ಲಿ ಉಷ್ಣಾಂಶ ಹೆಚ್ಚು ಇರುವುದರಿಂದ ಕುಡಿ ಮೊಳಕೆ 36 ಗಂಟೆಗಿಂತ ಮುಂಚೆ ಬರಬಹುದು.

ಎಕರೆಗೆ 8 ಕೆ.ಜಿ. ಮೊಳಕೆಯೊಡೆದ ಹೈಬ್ರಿಡ್ ಭತ್ತದೊಂದಿಗೆ ಸಮಪ್ರಮಾಣದ ಮೊಳಕೆ ಬಾರದ (ಹುರಿದ 12 ಗಂಟೆ ಕಾಲ ನೀರಿನಲ್ಲಿ ನೆನೆಸಿ ತೆಗೆದ) ಇತರೆ ಭತ್ತದೊಂದಿಗೆ ಬೆರೆಸಿ ಬಳಸುವುದು.

ನಂತರ ಡ್ರಂ ಸೀಡರನ್ನು ಕೆಸರು ಗದ್ದೆಯ ಒಂದು ಬದಿಯಿಂದ ಇನ್ನೊಂದು ಬದಿಗೆ ಸಾಲುಗಳು ಬರುವಂತೆ ಕೈಯಿಂದ ಎಳೆದಾಗ ಡ್ರಂ ನ ರಂಧ್ರಗಳ ಮೂಲಕ ಬಿತ್ತನೆ ಬೀಜ ಸಾಲಿನಲ್ಲಿ ಬೀಳುತ್ತವೆ. ಒಮ್ಮೆಗೆ ಎಂಟು ಸಾಲು ಮೂಡುತ್ತವೆ.

ಒಬ್ಬ ಕಾರ್ಮಿಕ ಒಂದು ದಿನಕ್ಕೆ 2 ಎಕರೆ ಸಲೀಸಾಗಿ ಬಿತ್ತನೆ ಮಾಡಬಹುದು. ಬಿತ್ತಿದ 10 ದಿನಗಳವರೆಗೆ ತೇವ ಆರದಂತೆ, ನೀರು ಸಹ ನಿಲ್ಲದಂತೆ ಎಚ್ಚರಿಕೆ ವಹಿಸಿ. ಪೈರು ಬೆಳೆದಂತೆ ನೀರಿನ ಪ್ರಮಾಣವನ್ನು ಹೆಚ್ಚಿಸಿ 2" ನೀರು ನಿಲ್ಲಿಸಿ.

ಅಂತರ ಬೇಸಾಯ

ಬಿತ್ತನೆ ಬೀಜವನ್ನು ನೇರವಾಗಿ ಸಾಲುಗಳಲ್ಲಿ ಬಿತ್ತುವುದರಿಂದ ಅಂತರಬೇಸಾಯ ಬಹು ಸುಲಭ. ಬಿತ್ತಿದ 20 ಮತ್ತು 40 ದಿನಗಳಲ್ಲಿ ಎರಡುಬಾರಿ ಕೋನೊವೀಡರನ್ನು ಸಾಲುಗಳ ಮಧ್ಯೆ ಹಾಯಿಸಬೇಕು. ಕೋನೊವೀಡರ್ ಬಳಸುವಾಗ ಗದ್ದೆಯಲ್ಲಿ 1/2 ಇಂಚಿನಿಂದ 1 ಇಂಚು ನೀರು ನಿಂತಿರಬೇಕು. ಪೋಷಕಾಂಶ ನಿರ್ವಹಣೆ ಹಾಗು ಸಸ್ಯ ಸಂರಕ್ಷಣೆ ಎಂದಿನಂತೆ ಪಾಲಿಸಬೇಕು.

ಕಳೆನಾಶಕಗಳ ಬಳಕೆ: ಉದಯಪೂರ್ವ ಕಳೆನಾಶಕವಾಗಿ ಎಕರೆಗೆ ಪ್ರೆಟಿಲಾಕ್ಲೋರ್ ಮತ್ತು ಸೇಫನರ್ ಶೇ. 30 ಇ.ಸಿ. 400 ಮಿ.ಲೀ. ಅಥವಾ ಶೇ. 10 ರ ಪೈರಜೋಸಲ್ಫುರಾನ್ ಈಥೈಲ್ 100 ಗ್ರಾಂ ಪುಡಿಯನ್ನು 30 ಕಿ.ಗ್ರಾಂ. ಹುಡಿಯಾದ ಮರಳಿನೊಡನೆ ಬೆರೆಸಿ, ಬಿತ್ತನೆ ಮಾಡಿದ 3 ರಿಂದ 5 ದಿವಸಗಳೊಳಗಾಗಿ ಗದ್ದೆಯಲ್ಲಿ ಎಲ್ಲಾ ಭಾಗಕ್ಕೂ ಬೀಳುವ ಹಾಗೆ ಎರಚಬೇಕು. ಕಳೆನಾಶಕವನ್ನು ಉಪಯೋಗಿಸುವ ಮುಂಚೆ ಗದ್ದೆಗೆ ನೀರು ಹಾಯಿಸಿ ಬಸಿಯಬೇಕು. ಬಸಿದ ನಂತರ ಕಳೆನಾಶಕವನ್ನು ಎರಚಬೇಕು.

ಡ್ರಂ ಸೀಡರ್ ಬಳಕೆಯ ಪ್ರಯೋಜನಗಳು

● ಸಕಾಲದಲ್ಲಿ ಬಿತ್ತನೆ ಮಡಿಕೊಳ್ಳಬಹುದು. ● ಬಿತ್ತನೆ ಬೀಜದ ಉಳಿತಾಯ. ● ಸಸ್ಯಸಂಖ್ಯೆ ಕಾಪಾಡಿಕೊಳ್ಳಬಹುದು. ● ಒಟ್ಟು ಹಾಗು ನಾಟಿಗೆ ತಗಲುವ ಖರ್ಚಿನಲ್ಲಿ ಉಳಿತಾಯ. ● ನಾಟಿಗೆ ಹೋಲಿಸಿದಲ್ಲಿ 10 ದಿನ ಮುಂಚಿತವಾಗಿ ಕಟಾವಿಗೆ ಬರುತ್ತದೆ. ● ಉಪಯೋಗಿಸುವುದು ಸರಳ ಮತ್ತು ಸುಲಭ.

ಕೂರಿಗೆಯಿಂದ ನೇರ ಭತ್ತದ ಬಿತ್ತನೆ

ಅತಿ ಹೆಚ್ಚು ಮಳೆ ಬೀಳುವ ಪಶ್ಚಿಮ ಘಟ್ಟ ಪ್ರದೇಶ ಹಾಗೂ ಅರೆಮಲೆನಾಡು ಪ್ರದೇಶಗಳಲ್ಲಿ ಭತ್ತವನ್ನು ಬಿತ್ತುತ್ತಾರೆ. ಅಚ್ಚುಕಟ್ಟು ಪ್ರದೇಶದಲ್ಲಿ ಭತ್ತವನ್ನು ನಾಟಿ ಮಾಡುವರು, ತುಂಗಭದ್ರ ಹಾಗೂ ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಕಾಲುವೆ ಕೊನೆ ಭಾಗದ ಹಳ್ಳಿಗಳಲ್ಲಿ ಭತ್ತವನ್ನು ನಾಟಿ ಮಾಡದೆ ಕೂರಿಗೆಯಿಂದ ನೇರವಾಗಿ ಬಿತ್ತನೆ ಮಾಡಲಾಗುತ್ತಿದೆ. ಅಚ್ಚುಕಟ್ಟು / ನೀರಾವರಿ ಪ್ರದೇಶದಲ್ಲಿ ಕೂರಿಗೆ ಭತ್ತ ಒಂದು ಹೊಸ ಅನುಭವವಾಗಿರುವುದರಿಂದ ಇದರ ಬೇಸಾಯ ಕ್ರಮಗಳ ಮಾಹಿತಿ ಈ ಕೆಳಗಿನಂತಿದೆ.

ಭೂಮಿ ತಯಾರಿಸುವುದು : ಭೂಮಿಯ ಹದವರಿತು, ಉಳುಮೆ ಮಾಡಿ, ಮಣ್ಣಿನ ಹೆಂಟೆಗಳನ್ನು ಒಡೆದು ಹಾಗೂ ಭೂಮಿಯನ್ನು ಸಮತಟ್ಟಾಗಿಸಿ ಬಿತ್ತನೆಗೆ ಸಿದ್ಧಗೊಳಿಸಬೇಕು. ಬೇಸಿಗೆ ಹಂಗಾಮಿನಲ್ಲಿ ಭತ್ತದ ನಂತರ ಭತ್ತ ಬೆಳೆಯುವುದಾದಲ್ಲಿ ಒಂದೆರಡು ಬಾರಿ ನೀರುಣಿಸಿ, ಹಿಂದಿನ ಬೆಳೆಯ ಬೀಜಗಳು ಮೊಳಕೆಯೊಡೆದ ನಂತರ ಕಳೆನಾಶಕ ಉಪಯೋಗಿಸಿ ಇಲ್ಲವೇ ಭೂಮಿಯನ್ನು ಉಳುಮೆಮಾಡಿ, ಸಮತಟ್ಟಾಗಿಸಿ ಬೀಜ ಬಿತ್ತಬೇಕು.

ಬಿತ್ತನೆ

ಮುಂಗಾರಿನಲ್ಲಿ ಅಚ್ಚುಕಟ್ಟು ಪ್ರದೇಶದಲ್ಲಿ ಕಾಲುವೆಗೆ ನೀರು ಬರುವ ಸಮಯಕ್ಕಿಂತ 30–35 ದಿವಸಗಳ ಮೊದಲು ಹದವಾದ ಮಳೆ ಬಿದ್ದ ನಂತರ ಇಲ್ಲವೇ ಒಣಭೂಮಿಯಲ್ಲಿ ಬಿತ್ತಬಹುದು. ನೀರಿನ ಸೌಲಭ್ಯವಿರುವಲ್ಲಿ ಭತ್ತ ಬಿತ್ತಿ ನೀರುಣಿಸಬಹುದು. ಬಿತ್ತುವ ಸಮಯದಲ್ಲಿ ಹಸಿ ಚೆನ್ನಾಗಿದ್ದರೆ ಅಥವಾ ಬಿತ್ತಿ ನೀರುಣಿಸುವುದಾದಲ್ಲಿ ಮೂಲ ಗೊಬ್ಬರವನ್ನು ಭತ್ತದ ಜೊತೆಗೆ ಬಿತ್ತುವುದು ಸೂಕ್ತ. ಟ್ರಾಕ್ಟರ್ ಚಾಲಿತ ಕೂರಿಗೆಯಿಂದ ಭತ್ತ ಬಿತ್ತನೆ ಮಾಡಬಹುದು. ಸುಧಾರಿತ ಉಳುಮೆ ಕೂರಿಗೆಯಿಂದ ಬೀಜವನ್ನು ಕೇವಲ 2 ರಿಂದ 3 ಸೆಂ.ಮೀ. ನಷ್ಟು ಆಳದಲ್ಲಿ ಬಿತ್ತಬಹುದು.

ತಳಿಗಳು ಮತ್ತು ಬೀಜದ ಪ್ರಮಾಣ

ಆಯಾ ಪ್ರದೇಶಕ್ಕೆ ಶಿಫಾರಸ್ಸು ಮಾಡಿದ ತಳಿಗಳನ್ನು ಆಯ್ಕೆ ಮಾಡಿ ಬಿತ್ತಬೇಕು. ತಳಿಯ ಕಾಳಿನ ಗಾತ್ರದ ಅನುಸಾರ ಎಕರೆಗೆ 8 ರಿಂದ 10 ಕಿ.ಗ್ರಾಂ. ಬೇಕಾಗುತ್ತದೆ.